MA 6/2022 ಪಿ.ಡಬ್ಲ್ಯೂ 1

ಇಂದು ದಿಃ 19.12.2024 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ

ಎದುರುದಾರರು ಓ ಎಸ್ 225/2020 ಅನ್ನು ವಿಚಾರಣಾ ನ್ಯಾಯಾಲಯದಲ್ಲಿ ದಾಖಲಿಸಿದ ನಂತರ ನಾನು ನನ್ನ ಪರವಾಗಿ ವಕೀಲರನ್ನು ನೇಮಿಸಿದ್ದೆ ಎಂದರೆ ಸರಿ. ಆ ನ್ಯಾಯಾಲಯದಲ್ಲಿ ನಾನು ತಕರಾರು ಸಲ್ಲಿಸಿ ಪ್ರಕರಣ ನಡೆಸುತ್ತಿದ್ದೆ ಎಂದರೆ ಸರಿ. ಆ ಪ್ರಕರಣದಲ್ಲಿ ನಾವು ಮತ್ತು ಈ ಪ್ರಕರಣಕ್ಕೆ ಸಂಬಂಧಪಟ್ಟ ಬೇರೆ ಪ್ರತಿವಾದಿಗಳು ಇದ್ದರು ಎಂದರೆ ಸರಿ. ಸರ್ವೆ ನಂಬರ್ 206/ಪಿ ನ 4 ಎಕರೆ ಆಸ್ತಿಗೆ ನಾವು ತೊಂದರೆ ಕೊಡಬಾರದು ಎಂದು ಏಕಪಕ್ಷೀಯ ತಡೆಯಾಜ್ಞೆ ಆದೇಶವಾಗಿತ್ತು ಎಂದರೆ ಸರಿ. ತದನಂತರ ನಾವು ಆಕ್ಷೇಪಣೆ ಸಲ್ಲಿಸಿ ಮಧ್ಯಂತರ ಆದೇಶವನ್ನು ಜಾರಿ ಮಾಡಿದರು ಎಂದರೆ ಸರಿ. ಆ ಆದೇಶವಾದ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ವಿಚಾರಣಾ ನ್ಯಾಯಾಲಯಕ್ಕೆ ನಾನು ಪ್ರತಿಬಾರಿಯೂ ಹಾಜರಾಗುತ್ತಿದ್ದೆ ಎಂದರೆ ಸರಿ. ನಾನು ಬರುತ್ತಿದ್ದ ಕಾರಣ ನನಗೆ ಪ್ರಕರಣದ ವಿದ್ಯಾಮಾನ ನನ್ನ ವಕೀಲರ ಮೂಲಕ ಗೊತ್ತಾಗುತ್ತಿತ್ತು. ಆದ್ದರಿಂದ ವಿಚಾರಣಾ ನ್ಯಾಯಾಲಯವು 10.11.2021 ರಂದು ಮಾಡಿದ ಆದೇಶ ನನ್ನ ಗಮನದಲ್ಲಿ ಇತ್ತು ಎಂದರೆ ಸರಿ. ಆದೇಶದ ಪ್ರತಿಯನ್ನು ನನ್ನ ವಕೀಲರು ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ. ಆದೇಶದ ಪ್ರತಿಯನ್ನು ತೆಗೆದುಕೊಳ್ಳಲು ತೊಂದರೆ ಇರಲಿಲ್ಲ.

ರಾಜಿಯಾಗುತ್ತದೆ ಎನ್ನುವ ಬಗ್ಗೆ ನನ್ನಲ್ಲಿ ಏನೂ ಪುರಾವೆ ಇಲ್ಲ. ರಾಜಿ ಮಾತುಕತೆ ವಿಚಾರಣಾ ನ್ಯಾಯಾಲಯದಲ್ಲಿ ನಡೆದಿಲ್ಲ. ತಾತ್ಕಾಲಿಕ ತಡೆಯಾಜ್ಞೆ ಜಾರಿಯಾದ ನಂತರವೂ ಸಹ ನಾವು ವಾದಿಗಳಿಗೆ ತೊಂದರೆ ಕೊಡುತ್ತಿದ್ದೆವು ಎಂದು ಪೊಲೀಸರ ಸಹಾಯ ಕೇಳಿಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಪೊಲೀಸರ ಸಹಾಯ ಕೊಡಬೇಕು ಎಂದು ಆದೇಶವಾದ ನಂತರ ಈ ಮೇಲ್ಮನವಿ ಸಲ್ಲಿಸಿದ್ದೇನೆ ಎಂದರೆ ಸರಿ. ಈ ಮೇಲ್ಮನವಿಯನ್ನು ತಡವಾಗಿ ಸಲ್ಲಿಸಲು ಯಾವುದೇ ಸಕಾರಣವಿಲ್ಲದಿದ್ದರೂ ನಾನು ವಾದಿಗಳಿಗೆ ತೊಂದರೆ ಕೊಡಲು ಈ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೇಲ್ಮನವಿಯನ್ನು ಸಕಾರಣವಿಲ್ಲದೇ ಸಲ್ಲಿಸಿದ ಕಾರಣ ಅದನ್ನು ವಜಾಗೊಳಿಸಬಹುದು ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.